ಶ್ರೀ ಬಿ. ರಾಚಯ್ಯ.—ಪರಿಶಿಷ್ಟದಲ್ಲಿ ಕೊಟ್ಟಿರತಕ್ಕ ಕೆರೆಗಳಲ್ಲಿ ಎಷ್ಟು ಕೆರೆಗಳಿಗೆ ಈ ವರ್ಷ ರಿಪೇರಿ ಮಾಡಿಸ ಬೇಕು ಎಂದು ಸರ್ಕಾರಕ್ಕೆ ಅಂದಾಜು ಬಂದಿದೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂಬತ್ತು ಲಕ್ಷ ಒಂಬತ್ತು ಸಾವಿರ ರೂಪಾಯಿಗಳಿಗೆ ಒಂದು ನೂತನ ಯೋಜನೆ ತಯಾರು ಆಗಿದೆ. ಈಗಾಗಲೇ ಒಂದು ಲಕ್ಷ 50 ಸಾವಿರ ರೂಪಾಯಿಗಳ ಕೆಲಸವಾಗಿದೆ ಎಂಬುದು ಮಾನ್ಯ ಸದಸ್ಯರಿಗೇ ಗೊತ್ತಿದೆ.

ಶ್ರೀ ಬಿ. ರಾಚಯ್ಯ.—ಈ ಯಳಂದೂರು ತಾಲ್ಲೂಕಿಗೆ ಸಂಬಂಧಪಟ್ಟ ಕೆರೆಗಳಿಗೆ ಮೂರು ವರ್ಷಗಳಿಂದ ಒಂಬತ್ತು ಲಕ್ಷ ರೂಪಾಯಿಗಳ ಯೋಜನೆಯೊಂದನ್ನು ತಯಾರುಮಾಡಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಬಿ. ರಾಚಯ್ಯ.—ಕಳೆದ ವರ್ಷ ಇಲ್ಲಿ ಒಂದು ಸಬ್‌ಡಿವಿಜ಼ನ್ open ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಬಿ. ರಾಚಯ್ಯ.—ಈ ಸಬ್‌ಡಿವಿಜ಼ನ್ ಒಂದು ವರ್ಷದಿಂದಲೂ ಕೂಡ ಕೇವಲ ಸಂಬಳ ಮಾತ್ರ ತೆಗೆದು ಕೊಂಡು ಬೇರೆ ಯಾವ ಕೆಲಸವನ್ನೂ ಮಾಡಿಲ್ಲ ಎಂಬುದು ಗೊತ್ತೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲು ಈ ಬಾಬಿಗೆ ಒಂದು ಲಕ್ಷ 50 ಸಾವಿರ ರೂಪಾಯಿಗಳನ್ನು ಒದಗಿಸಲಾತ್ತು. ಅಷ್ಟು ದುಡ್ಡು ಖರ್ಚಾದಮೇಲೆ further allotment ಇಲ್ಲದೆ ಅವರಿಗೆ ಕೆಲಸವಿಲ್ಲ.

ಶ್ರೀ ಬಿ. ರಾಚಯ್ಯ.—ಒಂಬತ್ತು ಲಕ್ಷದ ಸ್ಕೀಮನ್ನು ತಾವು ಮಂಜೂರು ಮಾಡಿದ್ದೀರಿ ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂಬತ್ತು ಲಕ್ಷದ ಒಂಬತ್ತು ಸಾವಿರ ಸ್ಕೀಂ ತಯಾರಾಗಿದೆ. ಅದರಲ್ಲಿ ಮೊದಲೇ ಎರಡು ಲಕ್ಷ 37 ಸಾವಿರದ ಐನೂರು ರೂಪಾಯಿಗಳನ್ನು ಮಂಜೂರು ಮಾಡಿದಮೇಲೆ ಒಂದು ಲಕ್ಷ 50 ಸಾವಿರ ರೂಪಾಯಿಗಳನ್ನು ಜಹಗೀರುದಾರರು ಕೊಟ್ಟಮೇಲೆ ಹಣ ಖರ್ಚುಮಾಡಿ ಕೆಲಸ ಮಾಡಿದೆ.

ಶ್ರೀ ಬಿ. ರಾಚಯ್ಯ.—ಒಂಬತ್ತು ಲಕ್ಷ ಸ್ಕೀಮನ್ನು ಮಂಜೂರು ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಸ್ಕೀಂ ಆಗ ಬೇಕೆಂದು ಸರ್ಕಾರ ಅಭಿಪ್ರಾಯಪಟ್ಟಿದೆ.

ಶ್ರೀ ಬಿ. ರಾಚಯ್ಯ.—ಈಗ ಜಹಗೀರ್ ಫಂಡಿನಲ್ಲಿ ದುಡ್ಡು ಇಲ್ಲ ಎಂದು ಹೇಳುತ್ತಿದ್ದಾರೆ ಅಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಬಿ. ರಾಚಯ್ಯ.—ಹಾಗಾದರೆ ಈ ಕೆಲಸ ಕಾರ್ಯಗಳು ನಡೆಯಬೇಕಾಗಿದ್ದರೆ ಸರ್ಕಾರದವರು ಇದಕ್ಕೆ ಗ್ರಾಂಟು ರೂಪದಲ್ಲಿಯೋ ಅಥವಾ ಸಾಲದ ರೂಪದಲ್ಲಿಯೋ ಹಣವನ್ನು ಕೊಟ್ಟು ಕೆಲಸ ಮಾಡಿಸು ತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಪರ್ಯಾಲೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ರಾಚಯ್ಯ.—ಒಂದು ವರ್ಷದಿಂದಲೂ ಇದು ತಮ್ಮ ಪರ್ಯಾಲೋಚನೆಯಲ್ಲಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಲ್ಪ ದಿವಸ ಗಳಿಂದ ಇದೆ.

ಶ್ರೀ ಬಿ. ರಾಚಯ್ಯ.—ಈ ವರ್ಷ ಕೆಲಸ ನಡೆಸುವು ದಕ್ಕೆ ಯೋಜನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನೇ ದೀರ್ಘ ವಾಗಿ ಸರಕಾರ ಪರ್ಯಾಲೋಚನೆ ಮಾಡುತ್ತಿದೆ.

ಶ್ರೀ ಬಿ. ರಾಚಯ್ಯ.—ಚಾಮರಾಜನಗರದ ಬಾಗಳಿ ದೊಡ್ಡ ಕೆರೆಯ ರಿಪೇರಿ ಬಗ್ಗೆ ಅಂದಾಜುತ ಯಾರಾಗಿದೆ. ಅದನ್ನು ಬೇಗ ಮಂಜೂರು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯೋಗ್ಯತಾ ಯೋಗ್ಯತೆಯನ್ನು ನೋಡಿ ಯಾವುದು feasible ಆಗಿ ದೆಯೋ ಅದನ್ನು ಮಂಜೂರು ಮಾಡುತ್ತೇವೆ.

Tanks in Madhugiri Sub-Division (Repairs).

Q.—271. Sri Mali MARIYAPPA (Pavagada).—

Will the Government be pleased to state :—

(*a*) the names of breached tanks in Madhugiri Revenue Sub-Division which are not repaired as yet ;

(*b*) the year in which each of the said tanks breached ;

(*c*) the stage at which each of the said breached tank record is pending ?

A.—Sri H. M. CHANNABASAPPA (Minister for Industries).—

(*a*) *Names of breached tanks which are not repaired as yet.*	(*b*) *The year in which the said tanks breached.*	(*c*) *The stage at which each of the said breached tank record is pending.*
Pavagada Taluk.		
Hosahally Obaladevarakere.	Information is not available.	The work is being executed.
Nidagal katte ...	Do	The work is just completed.
Rangappanahalli Kambalappanakere.	1934	Do
Mugudabetta Thippaianakere.	1934	The work has been dropped.
Karikalbande Brahmayyanakere.	1934	Estimate for Rs. 65,000 was deferred due to abnormally heavy cost.
Vadanakal Sakkaradakere...	1934	The estimate for Rs. 31,000 is under scrutiny.
Pothaganahally tank ...	1934	Work is being executed.
Inam Venkatapura Krishnappanakere.	1950	Breach filling work has been done.
Pondlijeevi Karikunte ...	1950	The work is under progress.
Upparahalli Adammanakere.	1934	The work is just completed.
Sulenaikanahally Akkammanakere.	Information not available.	A fresh enquiry is being conducted by the Assistant Engineer, Madhugiri.
Mugadalbetta Hosakere ...	Do	The project is being examined.
Kilarahally tank ...	Do	The work is dropped due to prohibitive cost.
Sira Taluk.		
Hunjanal tank ...	Do	The work is ordered to be dropped as the restoration of this tank affects Kallambella Village major tank.
Madhugiri Taluk.		
Channavara kunte ...	Do	Not proposed to be restored.
Muddenahally Hunasethoppinakunte.	Do	Do do
Koratagere Taluk.		
Nagalala tank ...	Do	The project is under examination.
Kothi Nagenahally tank ...	Do	Surveys have to be conducted and estimates prepared.
Channapatna katte ...		
Gattla Gollahally tank ...		
Veeragondanakatte ...		
Kolala tank ...	Do	Work is under progress.
Vajjanakurke tank ...	Do	The Irrigation Enquiry is conducted. The Chief Engineer has been requested to renew the project after orders are passed by Government on the report of the Committee constituted to examine the question of scales of contribution and water rate.

ಶ್ರೀ ಮಾಲ ಮರಿಯಪ್ಪ.—ಉತ್ತರದಲ್ಲಿ 4ನೇ ಕೆರೆಯಾದ ಮುಗುದ ಬೆಟ್ಟ ತಿಪ್ಪಯ್ಯನ ಕೆರೆಯ ಕಾಮಗಾರಿಯನ್ನು ಬಿಟ್ಟು ಬಿಡಲಾಗಿದೆ ಎಂದು ಹೇಳಿದೆ. ಅದಕ್ಕ ಕಾರಣವೇನು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಹಿಂದೆ ಮುಂಜೂರು ಆಗಿತ್ತು. ಆಗ ನುಮಾರು 2,467 ರೂಪಾಯಿಗಳು ಖರ್ಚಾಗಿ ಕೈಬಿಡಲಾಗಿದೆ. ಶ್ರೀ ಭೀಮಯ್ಯ ಎನ್ನುವವರು ಮುಂದೆ ಬಂದು ಕೆಲಸಮಾಡಿ ಈಗ ಕೈಬಿಟ್ಟರು. 18-1-1952 ರಲ್ಲಿ ಈ ಕೆಲಸ ತೆಗೆದುಕೊಂಡಿತ್ತು. ಈಚೆಗೆ ಯಾರೂ ಬಂದಿಲ್ಲ. ಅದಕ್ಕೋಸ್ಕರ ಕೈಬಿಡಲಾಗಿದೆ.

ಶ್ರೀ ಮಾಲ ಮರಿಯಪ್ಪ.—ಟೆಂಡರುಗಳನ್ನು ಏನಾದರೂ ಕರೆದು ಈ ಕೆಲಸ ಪೂರೈಸಿದ್ದೀರಾ? ಕೆಲಸ ಮಾಡುವುದಕ್ಕೆ ಬರಲಿಲ್ಲ ಎಂದರೆ ಕೆಲಸ ಪೂರೈಸುವುದಕ್ಕೆ ಏನು ಕ್ರಮವಿದೆಯೋ ಆ ಕ್ರಮಗಳನ್ನು ಕೈಗೊಂಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ರಮಗಳೆಲ್ಲವನ್ನೂ ಕೈಗೊಂಡಾದ ಮೇಲೆ, ಯಾರೂ ಕಂಟ್ರಾಕ್ಟರ್ ಬಾರದೆ ಇರುವ ಕಾರಣ, ಅಚ್ಚುಕಟ್ಟುದಾರರಿಗೇ ಕೆಲಸ ಕೊಡಬೇಕೆಂದು ಆಲೋಚನೆ ಮಾಡಿದೆವು. ಶ್ರೀ ಭೀಮಯ್ಯನವರು ಕೆಲಸ ಮಾಡುತ್ತೇನೆಂದು ಒಪ್ಪಿಕೊಂಡರೂ ಕೆಲಸ ಮಾಡುತ್ತಾ ಇಲ್ಲ. ಬಹಳ ಕಾಲದಿಂದ ಯಾರೂ ಮುಂದೆ ಬಾರದೇ ಇರುವುದರಿಂದ ಕೆಲಸಮಾಡಿಲ್ಲ.

ಶ್ರೀ ಮಾಲ ಮರಿಯಪ್ಪ.—ರೈತರು ಮುಂದೆ ಬಂದರೆ ಬೇರೆಯವರಿಗೆ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇರೆಯವರು ಯಾರಾದರೂ ಬಂದ ಪಕ್ಷದಲ್ಲಿ ಅದನ್ನು ಪುನರಾಲೋಚನೆ ಮಾಡುತ್ತೇವೆ.

ಶ್ರೀ ಮಾಲ ಮರಿಯಪ್ಪ.—ಮುಗುದ ಬೆಟ್ಟ ಹೊಸ ಕೆರೆ ಪ್ರಾಜೆಕ್ಟು is being examined ಎಂದು ಹೇಳೋಣವಾಗಿದೆ. 15 ವರ್ಷಗಳಿಂದ ಈ ಕೆರೆಯ ಅಂದಾಜುಗಳನ್ನು ಮಾಡುವುದು, ಮುಂದಕ್ಕೆ ಹಾಕುತ್ತಾ ಇರುವುದು, ಹೀಗೆಯೇ ನಡೆಯುತ್ತಾ ಇದೆಯಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ 3-2-55ರ latest position ಏನೆಂದರೆ, ಆ ಕೆರೆಯ ಅಂದಾಜು ಶಿಫಾರ್ಸು ಆಗಿ ಚೀಫ್ ಇಂಜನಿಯರ್‌ಗೆ ಬಂದಿದೆ.

ಶ್ರೀ ಮಾಲ ಮರಿಯಪ್ಪ.—ಮಾನ್ಯ ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ percentage of return ಕಡಮೆ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ, ಅದು ತೀರ್ಮಾನವಾಯಿತೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಮ್ಮ ಪ್ರೋತ್ಸಾಹನೆಗೆ ಉತ್ತರ ಕೊಡುತ್ತಾ, ಆ ಸಮಿತಿಯವರು ಶಿಫಾರಸು ಮಾಡಿದ್ದಾರೆಂದು ಹೇಳಿದೆ, ಇನ್ನೂ ತೀರ್ಮಾನವಾಗಿಲ್ಲ.

ಶ್ರೀ ಮಾಲ ಮರಿಯಪ್ಪ.—ಹೀಗೆ ಕಡಮೆ ಮಾಡದಿದ್ದರೆ ಬಹಳ ಕೆರೆಗಳ ಕಾಂಗಾರಿಯನ್ನು ತೀಗೆದು ಕೊಳ್ಳುವುದಕ್ಕಾಗುವುದಿಲ್ಲವೆಂಬುದು ಗೊತ್ತಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಷಯದಲ್ಲಿ ಬೇಗ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಮನಸ್ಸು ಮಾಡಿದೆ.

ಶ್ರೀ ಮುದ್ದುರಾಮಯ್ಯ.—ಕೊರಟಗೆರೆ ತಾಲ್ಲೂಕಿನಲ್ಲಿ ಒಡೆದು ಹೋಗಿರುವ ಅನೇಕ ಕೆರೆಗಳು ಈ ಪಟ್ಟಿಯಲ್ಲಿ ಸೇರಿಲ್ಲ, ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಬಂದಿರುವ ವರದಿಯ ಪ್ರಕಾರ ಎಲ್ಲ ಕೆರೆಗಳನ್ನೂ ಸೇರಿಸಿದೆ.

ಶ್ರೀ ಮುದ್ದುರಾಮಯ್ಯ.—ಅಳಾಲಸಂದ್ರ ವೆಂಕಟಾಪುರದ ಕೆರೆ ಮತ್ತು ಪುಟ್ಟಸಂದ್ರದ ಕೆರೆಗಳಿಗೆ ಅಂದಾಜುಗಳು ತಯಾರಾಗಿ irrigation enquiry ನಡೆದಿರುವದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಹೇಳಿದ ಮೇಲೆ ಅದನ್ನು ವಿಚಾರ ಮಾಡುತ್ತೇನೆ ; ಈಗ ಕೂಡ ನನಗೆ ಬಂದಿರುವ ಪಟ್ಟಿಯಲ್ಲಿ ಆ ಕೆರೆಗಳ ಹೆಸರಿಲ್ಲ.

Sri R. CHENNIGARAMIAH.—The last one in the list—Vajjanakurke Tank—what is the estimate for this tank ?

Sri H. M. CHANNABASAPPA.—Rs. 36,000.

Sri R. CHENNIGARAMIAH.—From how long is this case pending before the Government ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಚೀಫ್ ಇಂಜಿನಿಯರಿಗೆ ಇದನ್ನು 'ಎಕ್ಸ್‌ಪ್ಲೈರಿ'ಗೆ ಕಳುಹಿಸಿದ್ದೇವೆ.

Sri R. CHENNIGARAMIAH.—It is mentioned that a committee is constituted. What is the committee ?

Sri H. M. CHANNABASAPPA.—Nagan Gowda Committee.

Sri R. CHENNIGARAMIAH.—What for is this committee constituted ?

Sri H. M. CHANNABASAPPA.—To rationalise the water rates and contribution and etc.

Sri R. CHENNIGARAMIAH.—For the restoration of this tank, the estimate has been prepared by the Engineer and sent to Government and is pending before the Government from a very long time. Is it necessary to send it back again to this committee ?

Sri H. M. CHANNABASAPPA.—Certain water rates and contributions were proposed and Government has gone into the question and certain revised water rates and contribution have to be proposed. It has been sent back to the Assistant Engineer and the Executive Engineer has been directed to go into the matter and enquire the ryots with regard to the water rates and contribution.

Sugar Factory in Hiriyur

Q.—324. Sri V. MASIYAPPA (Hiriyur).—

Will the Government be pleased to state :—

(*a*) whether the people of Hiriyur have been requested to start a Sugar Factory in Hiriyur ;

(*b*) the action taken by them on the representation ?